Mango fruits Preservation Industry (steps to start).

Q.—579. Sri M. C. ANJANEYA REDDY (Chintamani).—

Will the Government be pleased to state :—

(*a*) whether they are aware that mango fruits are grown abundantly in Chintamani and Srinivasapur taluks ;

(*b*) whether they have contemplated to start a Mango-fruits Preservation Industry here with a view to help these fruit growers ?

A.—Sri H. SIDDAVEERAPPA (Minister for Home and Industries).—

(*a*) Yes.

(*b*) No proposal for starting a Mango-fruits Preservation Industry in these Taluks is under consideration; but a Scheme for the establishment of a Fruit Preservation Industry at Krishnarajapuram is being considered.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಶ್ರೀನಿವಾಸಪುರ, ಚಿಂತಾಮಣಿ ತಾಲ್ಲೂಕುಗಳಲ್ಲಿ ಹೆಚ್ಚಿಗೆ ಹಣ್ಣು ಬೆಳೆಯುತ್ತದೆಂದು ಒಪ್ಪಿದಮೇಲೆ ಅಲ್ಲೇಕೆ ಈ Fruit Preservation Industryಯನ್ನು ಸ್ಥಾಪನೆ ಮಾಡುವುದಿಲ್ಲ ?

ಶ್ರೀ ಎಚ್. ಸಿದ್ದವೀರಪ್ಪ.—ಒಂದೊಂದು ಊರಿನಲ್ಲೂ ಹಾಗೆ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಬೆಂಗಳೂರಿನಲ್ಲೇ ಮಾಡುವುದು ಸೂಕ್ತವೆಂದು ಸಲಹೆ ಬಂದಿದೆ. ಆ ವಿಚಾರವನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—Raw-material ಎಲ್ಲಿ ಸಿಕ್ಕುತ್ತದೋ ಅಲ್ಲಿ ಮಾಡುವುದು ಸೂಕ್ತವಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಆದರೆ, ಅಲ್ಲಿ ಒಂದು ವರ್ಷಕ್ಕೆ ಪೂರಾ ಬೇಕಾಗುವಷ್ಟು Raw-material ಸಿಕ್ಕುವುದಿಲ್ಲ. ತಮಗೇ ಗೊತ್ತಿರುವ ಹಾಗೆ ಅಲ್ಲಿನ ಮಾವಿನ ಹಣ್ಣು 2—3 ತಿಂಗಳು ಕಾಲ ಬರುತ್ತದೆ. ಇದನ್ನು ಯೋಚನೆ ಮಾಡಿ ಎಲ್ಲಾ ಕಡೆಯಿಂದಲೂ Raw-materialನ್ನು ಬೆಂಗಳೂರಿಗೆ ತರಿಸಿಕೊಂಡು ಬೆಂಗಳೂರಿನಲ್ಲೇ ಏರ್ಪಡಿಸಬೇಕೆಂದು ಯೋಚನೆ ಮಾಡಿದ್ದೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಅನೇಕ ಕೈಗಾರಿಕೆಗಳ ಉದ್ಯಮಗಳು ಈ ಸಿಟಿಯ ಪ್ರದೇಶದಲ್ಲೇ ಹೆಚ್ಚಾಗಿರುವುದರಿಂದ, ಬೇರೆ ತಾಲ್ಲೂಕ್ ಹೆಡ್ ಕ್ವಾರ್ಟರುಗಳಲ್ಲೂ ಇಂಥ ಕೈಗಾರಿಕೆಗಳನ್ನು ಏರ್ಪಾಡು ಮಾಡುವುದು ಸೂಕ್ತವಲ್ಲವೇ !

ಶ್ರೀ ಎಚ್. ಸಿದ್ದವೀರಪ್ಪ.—ಆಗಬಹುದು ; ಆದರೆ, ಅಲ್ಲಿ ಸಾಕಷ್ಟು ಕಚ್ಚಾ ಮಾಲು ಸಿಕ್ಕಬೇಕಲ್ಲವೇ ?

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಕೃಷ್ಣರಾಜಪುರದಿಂದ ಚಿಂತಾಮಣಿಗೆ ಎಷ್ಟು ದೂರವಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಚಿಂತಾಮಣಿ ತಾಲ್ಲೂಕು ಆಗಾಗ್ಗೆ ಕ್ಷಾಮಕ್ಕೆ ಈಡಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಕ್ಷಾಮದ beltನಲ್ಲಿ ಅದೂ ಸೇರಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಆದ್ದರಿಂದಲೇ ಇಂಥ ಕೈಗಾರಿಕೆಗಳ ಉದ್ಯಮಗಳಿಗೆ ಅಲ್ಲಿ ಅವಕಾಶ ಕೊಡಬೇಕಾದದ್ದು ಸೂಕ್ತವಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಆಗಲೇ ಹೇಳಿದ್ದೇನೆ, ಒಟ್ಟು ಹಣ್ಣುಗಳು ಬೆಳೆಯುವ ಪ್ರದೇಶ ನೋಡಿದರೆ 32,264 ಎಕರೆಗಳು ಮಾತ್ರ ಇವೆ. ಮುಖ್ಯವಾಗಿ ನಮಗೆ raw-materialಗಳು ನಲೀಸಾಗಿ ದೊರಕಬೇಕು. ಹಾನನದಕಡೆಯವರೂ ಹೀಗೆಯೇ ಕೇಳುತ್ತಿದ್ದಾರೆ. ಆದ್ದರಿಂದ ಎಲ್ಲಾ ಕಡೆಯಲ್ಲಿಯೂ ಬೆಳೆಯುವುದನ್ನು ಕ್ರೋಡೀಕರಿಸಿ ಬೆಂಗಳೂರಿನಲ್ಲಿ ಮಾಡುವುದರಲ್ಲಿ ಅನುಕೂಲವಿದೆ.

ಶ್ರೀ ಕೆ. ಲಕ್ಕಪ್ಪ.—ಫ್ರೂಟ್ ಪ್ರಿಸರ್ವೇಷನ್ ಕೈಗಾರಿಕೆಯನ್ನು ಬೆಂಗಳೂರಿನಲ್ಲಿ ಪ್ರಾರಂಭಿಸುವುದಕ್ಕೆ ಬದಲು ಹೆಚ್ಚಿಗೆ ಹಣ್ಣು ಸಿಕ್ಕುವ ಮಲೆನಾಡಿನಲ್ಲಿ ಏರ್ಪಡಿಸುವುದು ಸೂಕ್ತವಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಗ್ರಾಮಾಭ್ಯುದಯ ಮತ್ತು ಸಹಕಾರ ಎಂಬ ಪತ್ರಿಕೆಯ ಫೆಬ್ರುವರಿ ಸಂಚಿಕೆಯಲ್ಲಿ ಒಂದು ಭೂಪಟವನ್ನು ಕೊಟ್ಟಿದ್ದಾರೆ. ಅದರಲ್ಲಿ ಮೈಸೂರು ದೇಶದಲ್ಲಿ ಯಾವ ಯಾವ ಡಿಸ್ಟ್ರಿಕ್ಟಿನಲ್ಲಿ ಹಣ್ಣು ಬೆಳೆಯುತ್ತಿದೆಯೆಂದು ತಿಳಿಸಿದೆ. ಅದನ್ನು ನೋಡುವುದಾದರೆ ಬೆಂಗಳೂರು ಡಿಸ್ಟ್ರಿಕ್ಟಿನ ಸುತ್ತಮುತ್ತಲೂ ಹೆಚ್ಚಿಗೆ ಹಣ್ಣು ಬೆಳೆಯುತ್ತದೆಂದು ಗೊತ್ತಾಗುತ್ತದೆ. ಆದ್ದರಿಂದ ಬೆಂಗಳೂರಿನಲ್ಲಿ ಪ್ರಾರಂಭಿಸಬೇಕೆಂದಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಈ ಬಗ್ಗೆ ನಕಲೇಶಪುರದಲ್ಲಿ ಒಂದು ಕಂಪೆನಿ ಪ್ರಾರಂಭವಾಗಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎ. ಭೀಮಪ್ಪನಾಯಕ್.—ಹಲಸಿನ ಹಣ್ಣು, ಬಾಳೆ ಹಣ್ಣು, ಅಂಜೂರ, ದ್ರಾಕ್ಷಿ—ಇವುಗಳೆಲ್ಲಕ್ಕೂ ಈ fruit preservation plantನಿಂದ ಅನುಕೂಲವಾಗುತ್ತದೆಯಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೆರಳೆಕಾಯಿ, ಬಾಳೆ ಹಣ್ಣು, ಬೂದುಗುಂಬಳ, ಮಾವಿನ ಹಣ್ಣು, ಹಲಸಿನ ಹಣ್ಣು, roseberry ಎಲ್ಲವೂ ಸೇರುತ್ತವೆ.

Price of oil-cake supplied to Mandya Sugar Factory.

Q.—607. Sri G. S. BOMMEGOWDA (Mandya).—

Will the Government be pleased to state :—

whether they are aware that the price of oil-cake supplied this year to raiyats by the Mandya Sugar Factory is higher than the selling price outside ?

A.—Sri H. SIDDAVEERAPPA (Minister for Home and Industries).—

Yes.